# 31. ಪೋಷಕರಲ್ಲಿ ಆಶಾದಾಯಕ ಮನೋಭಾವ ಮೂಡಿಸಿದ ಭರವಸೆಯ ಶಾಲೆ

## ಸ. ಹಿ. ಪ್ರಾ. ಶಾಲೆ ಶೀರಿಹಳ್ಳಿ. ಮಳವಳ್ಳಿ ಕ್ಲಸ್ಟರ್ ಶಿಕಾರಿಪುರ ತಾಲೂಕ



ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಗಡಿಭಾಗದಲ್ಲಿರುವ ಒಂದು ಚಿಕ್ಕ ಹಳ್ಳಿ ಶೀರಿಹಳ್ಳಿ. ಇದು ಮಳವಳ್ಳಿ ಕ್ಲಸ್ಟರಿನಲ್ಲಿದೆ. ಈ ಗ್ರಾಮದ ಸ.ಹಿ.ಪ್ರಾ. ಶಾಲೆ ಯಲ್ಲಿ 2016ರಲ್ಲಿ ದಾಖಲಾತಿ ಕ್ಷೀಣಿಸುತ್ತ 32ಕ್ಕೆ ಬಂದಿತ್ತು. ಹೆಚ್ಚಿನ ಮಕ್ಕಳು ಖಾಸಗಿ ಶಾಲೆಗಳಿಗೆ ಹೋಗುತ್ತಿದ್ದರು. ಪೋಷಕರ ಮನವೊಲಿಕೆಯೊಂದಿಗೆ, ಮನೆ-ಮನೆಗೆ ಭೇಟಿ ನೀಡಿ ಪೋಷಕರಿಗೆ ನೀಡಿದ ಭರವಸೆಯನ್ನು ಕಾರ್ಯದಲ್ಲಿ ತೋರಿಸಿ, ಇಂದು 50 ವಿದ್ಯಾರ್ಥಿಗಳು ದಾಖಲಾಗಿರುವುದು ಸರ್ಕಾರಿ ಶಾಲೆಗಳಿಗೆ ಆಶಾದಾಯಕ ಬೆಳವಣಿಗೆ ಎನ್ನಬಹುದು .



ಶಾಲೆಯ ಮೈದಾನದಲ್ಲಿ ಸಹ ಶಿಕ್ಷಕಿಯರಾದ ಶ್ರೀಮತಿ ಜಯಶ್ರೀ ಹೆಚ್. ಇವರು ದಾನ ನೀಡಿದ 12 ತೆಂಗಿನ ಸಸಿಗಳನ್ನು ನೆಡುವ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಸರ ಪ್ರಜ್ಞೆ ಹಾಗೂ ಪ್ರತಿ ವಿದ್ಯಾರ್ಥಿಗೂ ಒಂದೊಂದು ಮರ ಬೆಳೆಸುವ ಜವಾಬ್ದಾರಿ ನೀಡುವ ಮೂಲಕ ಮಕ್ಕಳಲ್ಲಿ ನಾಯಕತ್ವ ಗುಣ ಬೆಳಸಲಾಗಿದೆ. ವಿಶೇಷವೆಂದರೆ ಕು.ಚಂದನ್ ಎಂಬ ಆರನೇ ತರಗತಿ ವಿದ್ಯಾರ್ಥಿ ಈ ಕಾರ್ಯದಿಂದ ಪ್ರೇರಣೆಗೊಂಡು ಹಾಳಾದ ತೆಂಗಿನ ಸಸಿಯ ಜಾಗದಲ್ಲಿ ತಾನೇ ಹೊಸ ತೆಂಗಿನ ಸಸಿಯನ್ನು ನೆಟ್ಟಿರುತ್ತಾನೆ.

**ಕು.ಚಂದನ 6ನೇ ತರಗತಿ ವಿದ್ಯಾರ್ಥಿ**



ಶಾಲೆಯ ಮೈದಾನದಲ್ಲಿ ಮಕ್ಕಳು ತಾವೇ ಬೆಳಸಿದ ಬಾಳೆ ಹಣ್ಣು, ಹಲಸಿನ ಹಣ್ಣುಗಳು ಹಾಗೂ ವಿವಿಧ ರೀತಿಯ ತರಕಾರಿಗಳನ್ನು ಬಿಸಿಯೂಟಕ್ಕೆ ಬಳಸುವುದು, ಗಾಂಧಿಜಿಯವರ ಮೂಲಶಿಕ್ಷಣವನ್ನು ನೆನಪಿಗೆ ತರುತ್ತದೆ. ಮರದ ಎಲೆಗಳನ್ನು ಸಂಗ್ರಹಿಸಿ ಗೊಬ್ಬರ ತಯಾರಿಕೆ, ಆ ಗೊಬ್ಬರವನ್ನು ಗಿಡಗಳಿಗೆ ಹಾಕುವದು ಮಕ್ಕಳ ರೂಪಣಾತ್ಮಕ ಮೌಲ್ಯ ಮಾಪನದ ಒಂದು ಭಾಗ, ಶಾಲಾ ಪರಿಸರದಲ್ಲೇ ವಿಜ್ಞಾನದ ಪ್ರಯೋಗ ಈ ಶಾಲೆಯಲ್ಲಿ ಮಕ್ಕಳಿಗೆ ಅತ್ಯಂತ ನೆಚ್ಚಿನ ಚಟುವಟಿಕೆಗಳಲ್ಲೊಂದು.ಉತ್ತಮವಾದ ನಲಿಕಲಿ ಕೊಠಡಿ ಹಾಗೂ ಕಲಿಕಾ ವಾತಾವರಣದಲ್ಲಿ ಮಗು ಸ್ವಕಲಿಕೆ, ಸ್ವವೇಗದಕಲಿಕೆ, ಸಂತಸದ ಕಲಿಕೆಯ ತತ್ವಗಳಡಿಯಲ್ಲಿ ಶಿಕ್ಷಣ ಪಡೆಯುತ್ತಿದೆ. ಪ್ರತಿ ವಿದ್ಯಾರ್ಥಿಗೂ ವೈಯಕ್ತಿಕ ಗಮನ ನೀಡುವುದರ ಮೂಲಕ ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಕ್ರಿಯಾಶೀಲ ಎಸ್.ಡಿ.ಎಂ.ಸಿ, ಹಾಗೂ ಊರ

ಗ್ರಾಮಸ್ಥರ ಸಹಕಾರ ವಿಶೇಷವಾಗಿ ಇವುಗಳನ್ನು ಸಾಧಿಸುವ ನಿಟ್ಟಿನಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ಸೋಮೇಶ್ .ಎಸ್ ಇವರ ಪರಿಶ್ರಮ ಶ್ಲಾಘನೀಯ.





